ಶ್ರೀ ಕೋಣಂದೂರು ಲಿಂಗಪ್ಪ.—ಮರೆನಾಡಿನಲ್ಲಿ ಪೂರ್ಣವಾಗಿ ಜಲ್ಲಿ ರಸ್ತೆ ಮಾಡಬೇಕೆಂದು ಜಿ. ಓ. ಇದೆ. ಆದರೆ ಬರೀ ಮಣ್ಣು ರಸ್ತೆ ಮಾತ್ರ ಇದೆ. ಜೆಲ್ಲಿ ರಸ್ತೆ ಮಾಡಿಲ್ಲ. ಆದುದರಿಂದ ಅಲ್ಲಿ ಪೂರ್ಣವಾಗಿ ಜೆಲ್ಲಿ ರಸ್ತೆಮಾಡುವಂತೆ ಆದೇಶ ಕೊಡುವಿರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಆದೇಶ ಸರಕಾರಿ ಆಜ್ಞೆಯಲ್ಲೇ ಇದೆ. ಮೊದಲು ಮಣ್ಣು ರಸ್ತೆ ಮಾಡಿ ಜಲ್ಲಿ ರಸ್ತೆ ಮಾಡುವುದಕ್ಕಾಗುವುದಿಲ್ಲ. ಮಣ್ಣು ರಸ್ತೆಯಾಗಿ 3 ರಿಂದ 6 ತಿಂಗಳಲ್ಲಿ ಸೆಟ್ಲ್‌ಡಾನ ಆದಮೇಲೆ ಬೌಲ್ಡರ್ ಹಾಕಿ ಆದು ಸಟ್ಲ್ ಆದಮೇಲೆ ಜಲ್ಲಿ ಹಾಕಬೇಕು. ಒಂದೇ ಸಲ ಜಿಲ್ಲಿ ಹಾಕುವುದಕ್ಕಾಗುವುದಿಲ್ಲ.

ಶ್ರೀ ಎಸ್. ಎಂ. ಶ್ರೀರನಾಳಿ ಚಂದ್ರಶೇಖರ್.—ಪ್ರತಿ ತಾಲ್ಲೂಕಿನಲ್ಲೂ 50 ಮೈಲಿಗೆ ಕಡಿಮೆ ಇಲ್ಲದಂತೆ ರಸ್ತೆ ಮಾಡಲಾಗುವುದೆಂದು ತಿಳಿಸಲಾಗುವುದೆಂದು ತಿಳಿಸಲಾಗಿದೆ. ಆದರೆ ಕೆಲವು ಕಡೆ ಆರ್. ಸಿ. ರಸ್ತೆ 5...10 ಮೈಲಿ ಇರುವುದು, ಉಳಿದುದನ್ನು ತೆಗೆದುಕೊಂಡರೆ 25-30 ಮೈಲಿ ಮಾತ್ರ ರಸ್ತೆ ಕೆಲಸ ಮಾಡಿದಂತಾಗುವುದು. ಇದನ್ನು ಸರಿಪಡಿಸುವಿರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಆಗಲೇ ಹೇಳಿದಂತೆ ಇವೀ ದೇಶದಲ್ಲಿರುವ ಎಲ್ಲಾ ತಾಲ್ಲೂಕುಗಳಲ್ಲೂ ಕಡಮೆ ಇರುವುದನ್ನು ನೋಡಿ ಹೆಚ್ಚು ಮಾಡಲಾಗಿದೆ. ಈಗ 50 ಮೈಲಿಯು ಪ್ರಶ್ನೆಯಲ್ಲಿ 150 ಮೈಲಿಯಾದರೂ ಬೇಕಾದರೆ ಸೇರಿಸಿ ತೆಗೆದುಕೊಳ್ಳುತ್ತೇವೆ ನಿಮ್ಮ ತಾಲ್ಲೂಕಿನಲ್ಲಿ.

Construction of Pick up Work Across Hebbala River in Kollegal Taluk

533. Sri R. RACHE GOWDA (Hanur).—

Will the Minister for Public Works and Electricity be pleased to state:—

(*a*) when the construction work of pick up across Hebbala river near Surapur village in Kollegal Taluk was started;

(*b*) when the said pick up work was expected to be completed ?

Sri H. M. CHANNABASAPPA (Minister for Public Works and Electricity).—

(*a*) The construction work of the pick-up was started in September, 1964.

(*b*) It was expected to be completed before 31st August 1966.

ಶ್ರೀ ಆರ್. ರಾಚೇಗೌಡ.—ಉತ್ತರದಲ್ಲಿರುವ ಪ್ರಕಾರ ಸೆಪ್ಟೆಂಬರಿನಲ್ಲಿ ಪ್ರಾರಂಭವಾದ ಪಿಕಪ್ 31-8-1966ರ ಒಳಗೆ ಮುಗಿಯಬೇಕಾಗಿತ್ತು, ಮುಗಿದಿಲ್ಲ ಎಂಬುದು ಗಮನಕ್ಕೆ ಬಂದಿದೆಯೇ ?

† ಶ್ರೀ ಎಚ್. ಎಂ. ಚನ್ನಬಸಪ್ಪ.—ಬಂದಿದೆ.

ಶ್ರೀ ಆರ್. ರಾಚೇಗೌಡ.—ಇದು 6 ವರ್ಷವಾದರೂ ಕೂಡ ಇನ್ನೂ ಮುಗಿಯದಿರಲು ಕಾರಣ ವೇನು ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಇದಕ್ಕೆ ಕಾರಣ ಇದೆ, ಅದು ನಿಧಾನವಾದುದು ಶೋಚನೀಯ, ತಕ್ಷಣ ಮುಗಿಸಲು ಏರ್ಪಾಡು ಮಾಡುತ್ತೇವೆ.